## ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.897/2024**

**CW : 03 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 13.11.2025**

| | |
|---|---|
| ಹೆಸರು | : ರಮೇಶ ಬಿರಾದಾರ |
| ತಂದೆಯ ಹೆಸರು | : ದೇವಪ್ಪ |
| ವಯಸ್ಸು | : 41 |
| ಉದ್ಯೋಗ | : ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಕಲಬುರಗಿ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಚಿತ್ತಾಪೂರ ವಲಯದಲ್ಲಿ 2020 ನವೆಂಬರನಿಂದ 2024 ಅಗಸ್ಟವರೆಗೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ದಿ: 22/04/2023 ರಂದು ನಾವು ಶಹಾಬಾದ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ದೂರವಾಣಿ ಮುಖಾಂತರ ಭಾತ್ಮಿ ಬಂದಿದ್ದು, ಸದರಿ ಭಾತ್ಮಿಯ ಪ್ರಕಾರ ಶಹಾಬಾದಿನ ಸ್ಟೇಷನ್ ತಾಂಡಾದ ಬಳಿ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಕೆ ಮಾಡುತ್ತಾರೆ ಎಂದು ಹೇಳಲಾಗಿತ್ತು. ಕೂಡಲೇ ನಾನು ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಶಹಾಬಾದನ ಬಸ ನಿಲ್ದಾಣಕ್ಕೆ ಬಳಿ ಹೋಗಿ ವಾಹನ ನಿಲ್ಲಿಸಿ, ಅಲ್ಲಿರುವ ಎರಡು ಜನರನ್ನು ಕರೆದುಕೊಂಡು ಭಾತ್ಮಿ ವಿಚಾರವನ್ನು ತಿಳಿಸಿದಾಗ, ಪಂಚರಾಗಲು ಅವರು ಒಪ್ಪಿಕೊಂಡಿರುತ್ತಾರೆ. ಆಗ ಸಮಯವು ಸಾಯಂಕಾಲ 5.30 ಆಗಿತ್ತು.

ಸಮವಸ್ತ್ರದಲ್ಲಿರುವ ನಮ್ಮನ್ನು ನೋಡಿ ಒಬ್ಬ ಮಹಿಳೆಯು ಗಾಬರಿಗೊಂಡು ಓಡಿ ಹೋಗಿದ್ದು ಇರುತ್ತದೆ. ಆ ಮಹಿಳೆಯನ್ನು ಹಿಡಿಯಲು ಪ್ರಯತ್ನಿಸಿದಾಗ ಸದರಿ ಮಹಿಳೆಯು ನಮಗೆ ಸಿಗಲಿಲ್ಲ. ನಾನು, ನನ್ನ ಸಿಬ್ಬಂದಿಗಳು ಮತ್ತು ಪಂಚರು ಮನೆ ಕಡೆ ಬಂದು ಕೂಗಿ ಕರೆದಾಗ ಯಾರೂ ಬರಲಿಲ್ಲ. ಮನೆಯ ಶೋಧನೆಗಾಗಿ ಅಲ್ಲಿ ನೆರೆದಿರುವ ಜನರನ್ನು ಪಂಚರಾಗಲು ಕೇಳಿಕೊಂಡಿದ್ದು ಅದಕ್ಕೆ ಅವರು ನಿರಾಕರಿಸಿರುತ್ತಾರೆ. ಆದ್ದರಿಂದ ನಮ್ಮ ಜೊತೆ ಬಂದಿರುವ ಪಂಚರನ್ನೇ ಮನೆಯ ಶೋಧನೆಗಾಗಿ ಪಂಚರನ್ನಾಗಿ ಮಾಡಿಕೊಂಡಿರುತ್ತೇವೆ.

ನಂತರ ನಾವು ಮನೆಯ ಒಳಗಡೆ ಹೋಗಿ ನೋಡಲಾಗಿ ಎರಡು ಕೋಣೆಗಳು ಕಂಡುಬಂದಿದ್ದು ಇರುತ್ತದೆ. ಮೊದಲನೇ ಕೊಣೆಯಲ್ಲಿ ನೋಡಲಾಗಿ ಏನೂ ಕಂಡು ಬರಲಿಲ್ಲ. ನಂತರ ಎರಡನೇ ಕೋಣೆಯಲ್ಲಿ ನೋಡಲಾಗಿ 5 ಲೀಟರಿನ 2 ಕ್ಯಾನಗಳು ಇರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ನಂತರ ಅದರ ಹತ್ತಿರ ಹೋಗಿ ನೋಡಲಾಗಿ ಬಿಚ್ಚಿ ನೋಡಿದಾಗ

ನಮಗೆ ಘಾಟ ವಾಸನೆ ಬಂದಿದ್ದು ಇರುತ್ತದೆ. ಆಗ ನಮಗೆ ಸದರಿ ದ್ರವ್ಯವು ಕಳ್ಳಭಟ್ಟಿ ಎಂದು ನಮಗೆ ತಿಳಿಯಿತು. ಅದರ ಪಕ್ಕದಲ್ಲಿಯೇ ಸುಮಾರು 200 ಲೀಟರ ಸಾಮರ್ಥದ ಒಂದು ಬ್ಯಾರಲ ಕಂಡುಬಂದಿದ್ದು, ಅದರಲ್ಲಿ 150 ಲೀಟರ ಬೆಲ್ಲದ ಕೊಳೆಯು ಇತ್ತು. ತಲಾ ಕ್ಯಾನಿನಿಂದ ನಾವು ರಾಸಾಯನಿಕ ಪರೀಕ್ಷೆಗಾಗಿ 180 ಎಮ್.ಎಲ್. ಅಳತೆಯುಳ್ಳ ಗಾಜಿನ ಬಾಟಲಿಯಲ್ಲಿ ತೆಗೆದುಕೊಂಡಿದ್ದು ಇರುತ್ತದೆ. ಹಾಗೂ ಬೆಲ್ಲದ ಕೊಳೆಯನ್ನು ಒಂದು ಲೀಟರ ಸಾಮರ್ಥ್ಯವುಳ್ಳ ಪ್ಲಾಸ್ಟಿಕ ಬಾಟಲಿಯಲ್ಲಿ ತೆಗೆದುಕೊಂಡಿರುತ್ತೇವೆ. ಅದರ ಮೇಲೆ ಮಾದರಿ ಚೀಟಿಯನ್ನು ತಯಾರಿಸಿ ಪ್ರಕರಣದ ವಿವರವನ್ನು ಬರೆದು ಅಂಟಿಸಿದ್ದು ಇರುತ್ತದೆ. ಸದರಿ ಬಾಟಲಿಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ, ದಾರವನ್ನು ಕಟ್ಟಿ ಇಲಾಖೆಗೆ ಸಂಬಂಧಪಟ್ಟ ಅರಕಿನ ಮೊಹರನ್ನು ಹಾಕಿರುತ್ತೇವೆ.

ಪಂಚನಾಮೆಯನ್ನು ನಾವು ಸಾಯಂಕಾಲ 5.30 ರಿಂದ 6.30 ರವರೆಗೆ ಮಾಡಿರುತ್ತೇವೆ. ನಂತರ ಠಾಣೆಗೆ ಹೋಗಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯಕ್ಕೆ ನಾವು ದಾಖಲಾತಿಗಳನ್ನು ರವಾನಿಸಿರುತ್ತೇವೆ ಹಾಗೂ ಸರ್ಕಾರಿ ತರಫೆ ಒಂದು ಫಿರ್ಯಾದಿಯನ್ನು ಮಾಡಿರುತ್ತೇವೆ. ನಂತರದಲ್ಲಿ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಶೋಧನೆ ಮಾಡಲು ಸ್ಥಳದಲ್ಲಿಯೇ ನಾವು ಸಮುಚ್ಚಯ ವಾರಂಟನ್ನು ಮಾಡಿಕೊಂಡು ನಂತರದಲ್ಲಿ ಮನೆಯ ಶೋಧನೆಯನ್ನು ಮಾಡಿರುತ್ತೇವೆ.

ಈ ಹಂತದಲ್ಲಿ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.1 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಎಂದು, ಶೋಧನಾ ಸಮುಚ್ಚಯವನ್ನು ನಿ.ಪಿ.2 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು, ಮಾದರಿ ಮುದ್ರೆ ನಮೂನೆಯನ್ನು ನಿ.ಪಿ.3 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.3 (ಎ) ಎಂದು, ಫಿರ್ಯಾದಿಯನ್ನು ನಿ.ಪಿ.4 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ.5 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.5 (ಎ) ಎಂದು, ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿರುವ ಗಾಜಿನ ಬಾಟಲಿ ಹಾಗೂ ಪ್ಲಾಸ್ಟಿಕ ಬಾಟಲಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ನಿಶಾನೆಗೊಳಿಸಲಾಯಿತು. ಆರೋಪಿಯನ್ನು ಗುರುತಿಸಬಲ್ಲೆ,

ನ್ಯಾಯಾಲಯದಲ್ಲಿ ಉಪಸ್ಥಿತರಿರುತ್ತಾರೆ. ಮುಂದಿನ ತನಿಖೆಗಾಗಿ ನಾನು ಸದರಿ ದಾಖಲಾತಿಗಳನ್ನು ಚಾಸಾ-6 ರವರಿಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಭಾತ್ಮಿ ಬಂದಾಗ ನಾನು ಜೇವರ್ಗಿ ರಸ್ತೆಯಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೆ. ನನ್ನನ್ನು ಹೊರತುಪಡಿಸಿ 2 ಸಿಬ್ಬಂದಿಗಳು ಇದ್ದರು. ಬಸ ನಿಲ್ದಾಣದಿಂದ ಜೇವರ್ಗಿ ಕ್ರಾಸ್ ಸುಮಾರು 1.5 ಕಿ.ಮೀ ಅಂತರದಲ್ಲಿ ಇರುತ್ತದೆ. ಸದರಿ ಪಂಚರನ್ನು ನಾವೇ ಬರಮಾಡಿಕೊಂಡಿರುತ್ತೇವೆ. ಘಟನಾ ಸ್ಥಳಕ್ಕೆ ಹೋದಾಗ 5.20 ಸಮಯ ಆಗಿತ್ತು. ಘಟನಾ ಸ್ಥಳವು ಒಂದು ಮನೆ ಆಗಿರುತ್ತದೆ. ಸದರಿ ಮನೆಯು ಆರ್.ಸಿ.ಸಿ. ಕಟ್ಟಡವಾಗಿದ್ದು, ಅದರಲ್ಲಿ ಎರಡು ಕೋಣೆಗಳು ಇರುತ್ತವೆ. ಈ ವಿಚಾರವನ್ನು ಫಿರ್ಯಾದಿಯಲ್ಲಿ ನಮೂದು ಮಾಡಿರುತ್ತೇವೆ.

ಘಟನ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಮನೆಗಳಲ್ಲಿ ಜನರು ವಾಸ ಮಾಡುತ್ತಾರೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ನಮ್ಮನ್ನು ನೋಡಿ ಸುಮಾರು 8 ಜನರು ಸೇರಿದ್ದರು. ಸದರಿ ಜನರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ಪ್ರಯತ್ನ ಮಾಡಿದೆವು ಆದರೆ ಅವರು ನಿರಾಕರಿಸಿದರು. ಈ ಪೂರ್ವದಲ್ಲಿಯೇ ನಾವು ಬಸ್ ನಿಲ್ದಾಣದಿಂದ ಪಂಚರನ್ನು ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿ. ಓಡಿ ಹೋದ ಮಹಿಳೆಯನ್ನು ಹಿಡಿಯಲು ನಾವು ಪ್ರಯತ್ನ ಮಾಡಿರುತ್ತೇವೆ.

ಸ್ಥಳದಲ್ಲಿಯೇ ಸಮುಚ್ಚಯ ವಾರಂಟನ್ನು ಮಾಡಿ ಮನೆಯನ್ನು ಪರಿಶೀಲನೆ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯಲ್ಲಿ ದೊರೆತ ಕ್ಯಾನುಗಳ ಬಣ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಫಿರ್ಯಾದಿಯಲ್ಲಿ ಸ್ಥಳದಲ್ಲಿ ದೊರೆತ ಬ್ಯಾರಲಿನ ಬಗ್ಗೆ ಬಣ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಮನೆಯ ನಂಬರಿನ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಯಾವ ವಾಹನದ ಮೂಲಕ ನಾವು ಘಟನಾ ಸ್ಥಳಕ್ಕೆ ಬಂದಿರುವ ಕುರಿತು ವಿವರವಾಗಿ ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

ಘಟನೆ ನಡೆದ ದಿನದಂದು ಗಸ್ತು ಕರ್ತವ್ಯದಲ್ಲಿ ಇದ್ದಾಗ ನಾನು ನಮ್ಮ ಸಿಬ್ಬಂದಿಗಳೊಡನೆ ಹಾಗೂ ಪಂಚರೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆಯನ್ನು

ಜರುಗಿಸಿ ಅಲ್ಲಿ ದೊರೆತ ಸಾರಾಯಿಯನ್ನು ನಮ್ಮ ತಾಬೆಗೆ ತೆಗೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದೊರೆತ ಸಾರಾಯಿಯಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದುಕೊಂಡೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಹಾಗೂ 2 ಇವರ ಸಮಕ್ಷಮದಲ್ಲಿ ಜಪ್ತು ಪಂಚನಾಮೆಯನ್ನು ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಡೆದ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಸಾರಾಯಿ ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗೋಸ್ಕರ ನಾವು ಆರೋಪಿತಳ ವಿರುದ್ಧ ಒಂದು ಸುಳ್ಳು ಫಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ನಾನು ಕಡತವನ್ನು ಚಾಸಾ-6 ಇವರಿಗೆ ಹಸ್ತಾಂತರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**